ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./30/2019–20

ದಿನಾಂಕ: 11.11.2019

## "ತಾತ್ಕಾಲಿಕ ವಿನ್ಯಾಸ ಅನುಮೋದನಾ ಪತ್ರ"

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಎ)ರಡಿಯಲ್ಲಿ)

**ವಿಷಯ:** ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದ ಸ. ನಂ. 349/3 ರಲ್ಲಿನ 01 ಎಕರೆ, ಸ.ನಂ. 349/5 ರಲ್ಲಿನ 17 ಗುಂಟೆ ಮತ್ತು ಸ. ನಂ. 349/6 ರಲ್ಲಿನ 16 ಗುಂಟೆ ಒಟ್ಟು 01 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:**
1. ಅರ್ಜಿದಾರರಾದ ಮೆ॥ ವಿ.ಆರ್. ಬಿಲ್ಡರ್ಸ್ & ಡೆವಲಪರ್ಸ್ ರವರು (ಈ ಹಿಂದೆ ಅರ್ಜಿದಾರರಾದ ಶ್ರೀಮತಿ ರುಕ್ಮಿಣಿ ಕೋಂ ಲೇಟ್ ಎ. ಲಕ್ಷ್ಮಣ್ ರವರು) ರವರ ಮನವಿ ಪತ್ರ ದಿನಾಂಕ: 27.09.2019.
2. ದಿನಾಂಕ: 09.10.2019 ರಂದು ನಡೆದ ಪ್ರಾಧಿಕಾರದ 80 ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ: 29 ರ ನಿರ್ಣಯ.
3. ಅರ್ಜಿದಾರರು ಪ್ರಾಧಿಕಾರಕ್ಕೆ ದಿನಾಂಕ: 22.10.2019 ರಂದು ಶುಲ್ಕ ಪಾವತಿಸಿರುವ ಬಗ್ಗೆ.
4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2ಎ) ಮತ್ತು 17(2ಬಿ) ರಲ್ಲಿನ ಅವಕಾಶದನ್ವಯ.

ಪ್ರಸ್ತಾವನೆ:–

**ಮೆ॥ ವಿ.ಆರ್. ಬಿಲ್ಡರ್ಸ್ & ಡೆವಲಪರ್ಸ್ ರವರು (ಈ ಹಿಂದೆ ಅರ್ಜಿದಾರರಾದ ಶ್ರೀಮತಿ ರುಕ್ಮಿಣಿ ಕೋಂ ಲೇಟ್ ಎ. ಲಕ್ಷ್ಮಣ್ ರವರು)** ಇವರು ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದ ಸ. ನಂ. 349/3 ರಲ್ಲಿನ 01 ಎಕರೆ, ಸ.ನಂ. 349/5 ರಲ್ಲಿನ 17 ಗುಂಟೆ ಮತ್ತು ಸ. ನಂ. 349/6 ರಲ್ಲಿನ 16 ಗುಂಟೆ ಒಟ್ಟು 01 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ **ವಸತಿ** ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ಉಲ್ಲೇಖ (01) ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವಸತಿ ವಲಯಕ್ಕಾಗಿ ಕಾಯ್ದಿರಿಸಲಾಗಿದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರಿಂದ ಈ ಕೆಳಕಂಡಂತೆ ಹೊಸಕೋಟೆ ಗ್ರಾಮದ **ಒಟ್ಟು 01 ಎಕರೆ 33 ಗುಂಟೆ** ವಿಸ್ತೀರ್ಣದ ಜಮೀನನ್ನು **ವಸತಿ** ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿರುತ್ತಾರೆ.

| ಕ್ರ ಸಂ. | ಸರ್ವೆ ನಂ. | ವಿಸ್ತೀರ್ಣ ಎ  ಗುಂ. | ಭೂ ಪರಿವರ್ತನೆ ಅಧಿಕೃತ ಜ್ಞಾಪನ ಪತ್ರ ಮತ್ತು ದಿನಾಂಕ |
|---|---|---|---|
| 1. | 349/3 | 01–00 | ಅರ್ಜಿ ಸಂ: 4005, ದಿನಾಂಕ: 06.07.2019 |
| 2. | 349/5 | 00–17 | ಅರ್ಜಿ ಸಂ: 4004, ದಿನಾಂಕ: 06.07.2019 |
| 3. | 349/6 | 00–16 | ಅರ್ಜಿ ಸಂ: 4003, ದಿನಾಂಕ: 06.07.2019 |
| ಒಟ್ಟು | | **01–33** | |

ಉಲ್ಲೇಖ (02) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ.

ಪ್ರಾಧಿಕಾರದ ತೀರ್ಮಾನದಂತೆ ಉಲ್ಲೇಖ (3) ರಂತೆ ಅರ್ಜಿದಾರರು ಅಗತ್ಯ ಶುಲ್ಕ **ರೂ. 3,33,821/– ಗಳನ್ನು** ಡಿಡಿ ಮೂಲಕ ಪ್ರಾಧಿಕಾರಕ್ಕೆ ಪಾವತಿಸಿದ್ದು, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ವಸತಿಗಾಗಿ 3972.51 ಚ. ಮೀ. (ಶೇ 53.81); ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 740.00 ಚ. ಮೀ. (ಶೇ 10.01); ನಾಗರೀಕ ಸೌಲಭ್ಯ (ಸಿ.ಎ) ನಿವೇಶನಕ್ಕಾಗಿ 371.80 ಚ.ಮೀ. (ಶೇ. 5.03) ಮತ್ತು ರಸ್ತೆಗಳಿಗಾಗಿ 2301.10 ಚ. ಮೀ. (ಶೇ 31.15) ವಿಸ್ತೀರ್ಣವನ್ನು ನಿಗದಿಪಡಿಸಲಾಗಿದ್ದು, ವಿನ್ಯಾಸದಲ್ಲಿ ಒಟ್ಟು 39 ವಸತಿ ನಿವೇಶನಗಳನ್ನು ಪ್ರಸ್ತಾವಿಸಲಾಗಿದೆ. ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ)ರಂತೆ ಅನುಮೋದಿತ ತಾತ್ಕಾಲಿಕ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಾಗವನ್ನು ಈ ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಹಸ್ತಾಂತರಿಸಿರುವ ಪರಿತ್ಯಾಜನಾ ಪತ್ರ, ಉದ್ಯಾನವನ ಮತ್ತು ಬಯಲುಜಾಗ ಹಾಗೂ ರಸ್ತೆಗಾಗಿ ಕಾಯ್ದಿರಿಸಿದ ಜಾಗವನ್ನು **ನಗರಸಭೆ, ಹೊಸಕೋಟೆ ರವರಿಗೆ** ಪುಕ್ಕಟೆಯಾಗಿ ಹಸ್ತಾಂತರಿಸಿರುವ ಪರಿತ್ಯಾಜನಾ ಪತ್ರದ ಪ್ರತಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಆದ್ದರಿಂದ ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ)ರಡಿಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ ಸಂಖ್ಯೆ: ಹೊ.ಯೋ.ಪ್ರಾ/ಎಲ್.ಎ.ಓ/30/2019–20, ದಿನಾಂಕ : 11.11.2019

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೊಸಕೋಟೆ ಗ್ರಾಮದ ಸ. ನಂ. 349/3 ರಲ್ಲಿನ 01 ಎಕರೆ, ಸ. ನಂ. 349/5 ರಲ್ಲಿನ 17 ಗುಂಟೆ ಮತ್ತು ಸ. ನಂ. 349/6 ರಲ್ಲಿನ 16 ಗುಂಟೆ ಒಟ್ಟು 01 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ) ರನ್ವಯ ವಿನ್ಯಾಸ ನಕ್ಷೆಯನ್ನು ಭೌತಿಕವಾಗಿ ಜಮೀನಿನ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸಲು ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, **"ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ"** ನೀಡಲಾಗಿದೆ.

1. ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ನೋಂದಣಿ ಮಾಡಿಕೊಂಡ ನಂತರವೇ ಸದರಿ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯ ನಿರ್ಮಾಣದ ವ್ಯವಹಾರದ ಕುರಿತು ಜಾಹೀರಾತು ಹಾಗೂ ಬುಕ್ಕಿಂಗ್ ಮಾಡತಕ್ಕದ್ದು".
2. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
3. ಈ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗಿದ್ದು, ಯಾವುದೇ ನಿವೇಶನಗಳನ್ನು ಬಿಡುಗಡೆ ಮಾಡಿರುವುದಿಲ್ಲ.

ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

4. ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆಯಂತೆ ಬಡಾವಣೆಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ಶೇ. 100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದು. ಅಲ್ಲಿಯವರೆಗೆ ವಿನ್ಯಾಸದಲ್ಲಿನ ಯಾವುದೇ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ.
5. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು ಹಾಗೂ ಅನುಮೋದನೆ ನೀಡಲಾದ ನಿರ್ದಿಷ್ಠ ಬಳಕೆಗೆ ಮಾತ್ರ ಅಭಿವೃದ್ಧಿಪಡಿಸತಕ್ಕದ್ದು. ಬದಲಾವಣೆ ಪ್ರಸ್ತಾಪಿಸಿದಲ್ಲಿ ಚಾಲ್ತಿಯಲ್ಲಿರುವ ಶುಲ್ಕ ಹಾಗೂ ನಿಯಮಗಳು ಅನ್ವಯವಾಗುತ್ತವೆ.
6. ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡ–ಮರಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಇಕ್ಕೆಲಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸಿಗಳನ್ನು ಬೆಳೆಸಲು ಸೂಕ್ತ ಕ್ರಮಕೈಗೊಳ್ಳಬೇಕು.
7. ಅನುಮೋದಿತ ವಿನ್ಯಾಸದಲ್ಲಿ ಮಳೆ ನೀರು ಕೊಯ್ಲಿಗಾಗಿ ಮತ್ತು ಅಂತರ್‌ಜಲವೃದ್ಧಿಗಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
8. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ–ಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
9. ಈ ಅನುಮೋದನೆಯನ್ನು ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ) ರಡಿಯಲ್ಲಿ ನೀಡಿರುವುದರಿಂದ, ಈ ಅನುಮೋದನೆಯನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಂಬಂಧ ಉಪಯೋಗಿಸಲು ಬರುವುದಿಲ್ಲ.
10. **ಪ್ರಸ್ತಾಪಿತ ವಸತಿ ವಿನ್ಯಾಸದ ಪ್ರದೇಶದ ಜಮೀನಿನಲ್ಲಿ ನಿರ್ಮಿಸಲಾಗುವ ಮಳೆ ನೀರು ಚರಂಡಿಗಳನ್ನು ಮುಚ್ಚದಂತೆ ಮುಕ್ತವಾಗಿಟ್ಟು ನಿರ್ಮಾಣ ಮಾಡತಕ್ಕದ್ದು. ಕೊಳಚೆ ನೀರನ್ನು ಮಳೆ ನೀರು ಚರಂಡಿಗೆ ಬಿಡದಂತೆ ಕ್ರಮ ವಹಿಸತಕ್ಕದ್ದು.**
11. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರವು ಯಾವುದೇ ಪೂರ್ವ ಸೂಚನೆಯು ಇಲ್ಲದೇ ತಂತಾನೇ ರದ್ದುಗೊಳ್ಳುತ್ತದೆ.
12. ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಪ್ರಾಧಿಕಾರವು ಅನುಮೋದಿಸಿರುವ ತಾತ್ಕಾಲಿಕ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರುತ್ತದೆ.
13. ಸರ್ಕಾರಿ ಖರಾಬು ಇದ್ದಲ್ಲಿ, ಸದರಿ ಪ್ರದೇಶವನ್ನು ಒತ್ತುವರಿ ಮಾಡದೆ ಹಾಗೇ ಮೀಸಲಿರಿಸಿ ಸಂರಕ್ಷಿಸತಕ್ಕದ್ದು ಹಾಗೂ ಸ್ಥಳೀಯ ಸಂಸ್ಥೆಗಳು ವಿಧಿಸುವ ಷರತ್ತುಗಳನ್ನು ಪಾಲಿಸತಕ್ಕದ್ದು.
14. ರಾಜ ಕಾಲುವೆಯನ್ನು ಮುಚ್ಚದಂತೆ ಮತ್ತು ರಾಜ ಕಾಲುವೆಗಳಿಗೆ ಯಾವುದೇ ಕೊಳಚೆ ನೀರು ಹಾಗೂ ಇನ್ನಿತರೆ ತ್ಯಾಜ್ಯ ವಸ್ತುಗಳು ಸೇರ್ಪಡೆಯಾಗದಂತೆ ಕ್ರಮವಹಿಸುವುದು.
15. ಕಂದಾಯ ಇಲಾಖೆಯ ದಾಖಲೆಗಳಂತೆ ಇರುವ ರಾಜ ಕಾಲುವೆಗಳ ಅಳತೆಗಳನ್ನು ಅತಿಕ್ರಮ / ಒತ್ತುವರಿ ಆಗದಂತೆ ಯಥಾವತ್ತಾಗಿ ಕಾಯ್ದಿರಿಸಿಕೊಂಡು ಸರಾಗವಾಗಿ ನೀರು ಹರಿಯಲು ಬೇಕಾದ ಮತ್ತು ರಾಜ ಕಾಲುವೆಗಳು Silt ಆಗದಂತೆ ಹಾಗೂ ತೆರೆದ ಸ್ಥಿತಿಯಲ್ಲಿ ಸ್ವಚ್ಛವಾಗಿರುವಂತೆ ಕ್ರಮವಹಿಸುವುದು.
16. ವಿನ್ಯಾಸವನ್ನು ಕಾರ್ಯಗತಗೊಳಿಸುವ ಮೊದಲು ಸ್ಥಳೀಯ ಸಂಸ್ಥೆ ಕಾಯ್ದೆಯಡಿ ನಗರಸಭೆ, ಹೊಸಕೋಟೆ ವತಿಯಿಂದ ಪರವಾನಗಿ ಪಡೆಯತಕ್ಕದ್ದು.

17. ಈ ವಿನ್ಯಾಸ ನಕ್ಷೆಯನ್ನು ಅರ್ಜಿದಾರರು ನೀಡಿರುವ ರೆವಿನ್ಯೂ ದಾಖಲೆಗಳನ್ನು ಆಧರಿಸಿ ತಯಾರಿಸಲಾಗಿದೆ. ಈ ಜಮೀನಿನ ಮಾಲೀಕತ್ವ ಮತ್ತು ಜಮೀನಿನ ಗಡಿಗಳಿಗೆ ಸಂಬಂಧಪಟ್ಟಂತೆ ಮತ್ತು ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

18. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಅನುಮೋದನೆಯು ಯಾವ ಪೂರ್ವ ಸೂಚನೆಯೂ ಇಲ್ಲದೆ ಕೂಡಲೇ ರದ್ದಾಗುವುದು ಹಾಗೂ ಕೆಟಿಸಿಪಿ (ತಿದ್ದುಪಡಿ) ಕಾಯ್ದೆ 1961 ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ಪ್ರತಿಗಳನ್ನು:

1. ಪೌರಾಯುಕ್ತರು, ನಗರಸಭೆ, ಹೊಸಕೋಟೆ ಇವರಿಗೆ ವಿನ್ಯಾಸದ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಮೆ॥ ವಿ.ಆರ್. ಬಿಲ್ಡರ್ಸ್ & ಡೆವಲಪರ್ಸ್, ಹೊಸಕೋಟೆ ಟೌನ್, ಹೊಸಕೋಟೆ ಇವರಿಗೆ ಮಾಹಿತಿಗಾಗಿ ಹಾಗೂ ಸ್ಥಳದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ವಿನ್ಯಾಸ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.